Reg No. B G 155

18-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತೆಲಂಗಾಣಾ ಚಳವಳಿಯಲ್ಲಿ ಮಹಿಳಾ ದಿನ

PRAYER

— Let us pray in tune with General Brooke —

God give us men, a time like this demands,
Great hearts, strong minds, true faith and willing hands,
Men whom lust of life does not kill
Men whom spirit of office cannot buy
Men who possess opinion and free will
Men who have honour, men who will not die.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ನಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜ ಒಡೆಯರ್ ಮೈಸೂರು 4.

ತೆಲಂಗಾಣಾ ಚಳವಳಿ

ಹೈದರಾಬಾದು — ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಪ್ರತ್ಯೇಕ ತೆಲಂಗಾಣಾ ಕೇಳುತಾ ಬಂದ ಹೈದರಾಬಾದು ಮೇಯರ್ ಶ್ರೀಮತಿ ಕುಮುದಾ ನಾಯಿಕ್ ಮತ್ತಿತರ ಮಹಿಳಾ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟರು — ಚಳವಳಿಯಲ್ಲಿ ನಿನ್ನೆ ಮಹಿಳಾ ದಿನ — ಪ್ರಜಾ ಸಮಿತಿ ಅಧ್ಯಕ್ಷ ಶ್ರೀ ಚೆನ್ನಾರೆಡ್ಡಿಯವರ ಪತ್ನಿ, ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಉಪಕುಲಪತಿ ರಾವಡೇ ಸತ್ಯನಾರಾಯಣರ ಪತ್ನಿ ಬಂಧಿಸಲ್ಪಟ್ಟರು.

★

ಗೋಳೀಬಾರು

ಮಧುರೈ — ಥೇನಿ ಪೋಲೀಸು ಸ್ಟೇಷನ್ನನ್ನು ಮುತ್ತಲು ಬಂದ 2000 ಮಂದಿಯ ಭೀಕರ ಗುಂಪನ್ನು ಎದುರಿಸಲು ಪೋಲೀಸರು ಗುಂಡುಹಾರಿಸಿದರು; ಒಬ್ಬ ಸತ್ತು 6 ಮಂದಿ ಗಾಯಗೊಂಡರು.

●

ಆನೆ ಹಾವಳಿ

ಬೆಂಗಳೂರು — ಗಿಬ್ಬನ್ನೀರುಘಟ್ಟ ಗ್ರಾಮಗಳಲ್ಲಿ 30 ಕಾಡಾನೆಗಳು ಭತ್ತದ ಗದ್ದೆಗಳಲ್ಲಿ ದಾಂಧಲೆ ಮಾಡುತ್ತಿವೆ — ಕೊಡಗಿನ ಟೆ' ಎಸ್ಟೇಟುಗಳಲ್ಲೂ ಭತ್ತದ ಗದ್ದೆಗಳಲ್ಲಿ ಕಾಡಾನೆಗಳ ಹಾವಳಿ.

ರಿಕ್ಷಾ ಎಳೆಯುವ ಮಹಿಳೆ

ವಾರಣಾಸಿ — ಹೊಟ್ಟೆಪಾಡಿಗಾಗಿ ಒಬ್ಬ ಹೆಂಗಸು ರಿಕ್ಷಾ ನಡೆಸುತ್ತಿರುವದು ಜನರನ್ನು ಡಂಗುಬಡಿಸಿದೆ.

★

ರಾಷ್ಟ್ರಾಧ್ಯಕ್ಷತೆಗೆ

ನವದೆಹಲಿ — ರಾಷ್ಟ್ರಾಧ್ಯಕ್ಷತೆಗೆ ದೇಶ ವಿವಿಧ ಭಾಗಗಳಿಂದ 18 ಮಂದಿ ಉಮೇದಾವಾರರಿರುವರೆನ್ನಲಾಗಿದೆ.

★

ಸುಖಭೋಗ ಹೋಟಲು

ಬೆಂಗಳೂರು — ಮಣಿಪಾಲಿನಲ್ಲಿ ಆ ಕ್ಟೋಬರಿನಲ್ಲಿ ರೂ 25 ಲಕ್ಷದ ಸುಖ ಭೋಗ ಹೋಟಲು ಮತ್ತು ಆರೋಗ್ಯ ಕ್ಲಬ್ಬನು ಕೇಂದ್ರ ಮಂತ್ರಿ ಡಾ|| ಕರಣ ಸಿಂಗ್ ಉದ್ಘಾಟಿಸುವರು.

★

ತಟಸ್ಥ ದೇಶಗಳ ಸಮ್ಮೇಳನ

ಬೆಲ್ಗ್ರೇಡ್ — 59 ದೇಶಗಳಲ್ಲಿ 39 ತಟಸ್ಥ ರಾಷ್ಟ್ರಗಳನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ — ಸಮ್ಮೇಳನ ಇಲ್ಲಿ ಜೂಲೈ 8 ರಿಂದ 10 ರವರೆಗೆ ನಡೆಯಲಿದೆ.

★

ವಿಷಕಂಠ ವಿಜಯ ನಾಟಕ

ಬೆಂಗಳೂರು — ಗುಬ್ಬಿ ತಾಲ್ಲೂಕು ಗಂಗಸಂದ್ರ ಗ್ರಾಮದಲ್ಲಿ ನಡೆಸಲೇರ್ಪಡಿಸಿರುವ ವಿಷಕಂಠ ವಿಜಯ ನಾಟಕ ಅಭಿನಯವನ್ನು ಸಬ್ ಡಿವಿಜ಼ನ್ ಆಫೀಸರರು ಪ್ರತಿಬಂಧಿಸಿರುವರು — ಆದರೆ ಈ ಆಜ್ಞೆಯನ್ನು ಪ್ರಜಾಸೋಸಲಿಸ್ಟು ಪಕ್ಷ ಉಲ್ಲಂಘಿಸಲು ನಿರ್ಧರಿಸಿರುವಂತೆ.

ಪೂಜಾರಿ ಕೊಲೆ

ಬೊಂಬಾಯಿ — ಆಂಧೇರಿಯ ಗಾವ ದೇವಿ ದೇವಾಲಯದ ಪೂಜಾರಿಯು ದೇವಾಲಯದ ಹತ್ತಿರ ಸತ್ತು ಬಿದ್ದಿರುವುದು ಕಂಡುಬಂದಿತು — ಕೊಡಲಿ ಅವನ ತಲೆಗೆ ಸಿಕ್ಕಿಕೊಂಡಿತ್ತು — ಅವನಿಗೆ ಶತ್ರುಗಳ್ಯಾರೂ ಇಲ್ಲವೆಂದು ಪೋಲೀಸರು ಹೇಳಿದರು — ಇನ್ನೂ ಯಾರ ದಸ್ತಗಿರಿಯೂ ಆಗಿಲ್ಲ.

ಮರದ ಕಾರ್ಖಾನೆ ಸುಟ್ಟುಹೋಯಿತು

ಮಡಕೇರಿ — ಶನಿವಾರಸಂತೆಯಲ್ಲಿ ಒಂದು ಮರದ ಕಾರ್ಖಾನೆ ವಿದ್ಯುಚ್ಛಕ್ತಿ ಷಾರ್ಟ್ ಸರ್ಕೀಟಿನಿಂದ ಸುಟ್ಟುಹೋಯಿತು — ನಷ್ಟ ರೂ. 2 ಲಕ್ಷ.

ಫೇರಾವೋ ನ್ಯಾಯಬಾಹಿರ

ಬೆಂಗಳೂರು — ಫೇರಾವೋ ನ್ಯಾಯ ಬಾಹಿರವೆಂದು ಗೌರ್ನರ್ ಪಠಕ್‌ರವರು ಹೇಳಿದರು.

ಸೇತುವೆ ಕೊಚ್ಚಿಹೋಯಿತು

ಗೌಹತಿ — ಉತ್ತರ ಲಕ್ಷ್ಮಿಪುರದಲ್ಲಿ ಟ್ರಂಕ್ ರೋಡಿನಲ್ಲಿ ಒಂದು ಸೇತುವೆಯು ನೆರೆಹಾವಳಿಯಲ್ಲಿ ಕೊಚ್ಚಿಹೋಯಿತು.

ಎಲೆಕ್ಷನ್ ಕಮಿಷನ್‌ಗೆ

ನವದೆಹಲಿ — ಎಲೆಕ್ಟ್ರಿಕ್ ಕಮಿಷನ್ನಿಗೆ ಹೊಸ ಕಟ್ಟಡಕ್ಕಾಗಿ ಸರಕಾರ ರೂ. 30 ಲಕ್ಷ ಮಂಜೂರ್ಮಾಡಿದೆ.

ಆಗ್ನಿ ಅನಾಹುತ

ತಿರುಚಿ — ಕಾಸಗಡಿ ಗ್ರಾಮದಲ್ಲಿ ಅಗ್ನಿ ಅನಾಹುತದಲ್ಲಿ ಒಬ್ಬ ಹತ್ತು ವರ್ಷದ ಹುಡುಗ ಸುಟ್ಟುಹೋದನು - 18 ಗುಡಿಸಲುಗಳೂ ದನದಕೊಟ್ಟಿಗೆಗಳೂ ಭಸ್ಮವಾದವು - ನಷ್ಟ ರೂ 20009.

ದಿವ್ಯವಾಣಿ

ರಕ್ಷಣೆಯು ಅಪಾಯದ ತಾಯಿ, ನಾಶದ ಆಜ್ಞೆ. --ಥಾಮಸ್ ಫುಲ್ಲರ್

ಪುರುಷಸೂಕ್ತ

ಸಂಗ್ರಾಹಕರು :
ಅ. ನ. ಅಯ್ಯಂಗಾರ್

[ಮುಂದುವರಿದುದು]

ಸಹಸ್ರ ಶಿರಸ್ಸುಗಳಿಂದಲೂ, ಸಹಸ್ರ ನೇತ್ರಗಳಿಂದಲೂ ಕೂಡಿರುವ ಪರಮ ಪುರುಷನಾದ ನಾರಾಯಣನು ಚೇತನಾಚೇತನ ಸಮೂಹವನ್ನು ಅಂತರ್ಬಹಿಃ ವ್ಯಾಪಿಸಿಕೊಂಡು ಅಸಂಖ್ಯಾತ ಯೋಜನವನ್ನತಿಕ್ರಮಿಸಿ ಇರುವನು. ಅಂದರೆ ಅಪರಿಚ್ಛಿನ್ನನಾಗಿರುವನು ಚೇತನಾಚೇತ್ಕವಾದ ಪದಾರ್ಥಗಳಿಗೆ ಶರೀರತ್ವವೂ, ಪರಮಾತ್ಮಕವಾದ ಪದಾರ್ಥಗಳಿಗೆ ಶರೀರತ್ವವೂ, ಪರಮಾತ್ಮನಿಗೆ ಆತ್ಮತ್ವವೂ ಹೇಳಲ್ಪಟ್ಟಿರುವುದರಿಂದ, ವರ್ತಮಾನ, ಭೂತ, ಭವಿಷ್ಯತ್ಕಾಲೀನಗಳಾದ ಸಕಲ ಪದಾರ್ಥ ಶರೀರಕನಾದ ಬ್ರಹ್ಮಣೀ ಪುರುಷಶಬ್ದವಾಚ್ಯ ನಾರಾಯಣನು. ಯಾವ ಪರಮಪದವೆ ಪರಮಾತ್ಮನಿಂದ ಕೂಡಿ ನಿತ್ಯಾಪೂರ್ವವಾದುದೋ ಸಾದಿಯಲ್ಲಿ ಲೀಲಾವಿಭೂತಿಯನ್ನತಿಕ್ರಮಿಸಿ ಪ್ರಕಾಶಿಸುವುದೋ ಅಂತಹ ಪರಮಪದಕ್ಕೆ ಆತನೇ ಸ್ವಾಮಿಯು. ಈ ಪರಮ ಪುರುಷನ ವೈಭವವು ಅಪರಿಚ್ಛಿನ್ನವಾಗಿರುವುದು. ಅದಕಾರಣ ಪುರುಷನೆಂದು ಹೇಳಲ್ಪಡುವ ನಾರಾಯಣನು ಸರ್ವಶ್ರೇಷ್ಠನು. ಅಚಿತ್ಸಂಸೃಷ್ಟವಾದ ಸಕಲ ಜೀವರುಗಳು ಈ ಪರ ಪುರುಷನ ಕಾಲು ಭಾಗ. ಪರಮಪದದಲ್ಲಿ ಜರಾಮರಣಾದಿರಹಿತ ನಿತ್ಯ ವಸ್ತುವು ಆತನ ಮುಕ್ಕಾಲು ಭಾಗವಿದೆ.

ಸರ್ವಪ್ರಕಾರ ಪರಿಪೂರ್ಣನಾಗಿಯೂ, ಸಮಾಭ್ಯಧಿರಹಿತನಾಗಿಯೂ, ಅಪರಿಚ್ಛಿನ್ನ (ಅಳತೆಗೆ ಸಿಕ್ಕದ) ಜ್ಞಾನಶಕ್ತ್ಯಾದಿಗಳನ್ನುಳ್ಳವನಾಗಿ, ಅವಾಙ್ಮನಸಗೋಚರನಾಗಿಯೂ ಇರುವ ಪರಮಪುರುಷನು ಪರಮ ಕೃಪೆಯಿಂದ ಸಕಲ ಜಗದ್ರಕ್ಷಣಾರ್ಥವಾಗಿ ಈ ಲೀಲಾವಿಭೂತಿಯಲ್ಲಿ ಅವತಾರ ಮಾಡಿದನು ಆದಿ ಪುರುಷನಾದ ವಾಸುದೇವನು ಜಗತ್ತನ್ನು ರಕ್ಷಿಸುವುದಕ್ಕೋಸ್ಕರ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಾವತಾರಗಳನ್ನಂಗೀಕರಿಸಿದನು. ಹೀಗೆ ಪರಂಪರೆಯಿಂದ ಅವತರಿಸಿದ ಅನಿರುದ್ಧ ಮೂರ್ತಿಯಿಂದ ಚತುರ್ಮುಖನು ಜಗತ್ಸೃಷ್ಟಿಗೋಸ್ಕರ ಸೃಷ್ಟಿಸಲ್ಪಟ್ಟನು. ಸ್ಥಾವರಜಂಗಮಾತ್ಮನಾದ ಪ್ರಪಂಚರೂಪವಾಗಿ ತಾನು ಬಹುಪ್ರಕಾರವಾಗಲು ಸಂಕಲ್ಪಮಾಡಿದನು.

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುವ ಕೇಂದ್ರ



Protect the Cow

SHAKTI

SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 4-ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದುನಿಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲ್‌ರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಆಪೆದಾ— 13–6–69 ರಿಂದ

.... ಮನಮೋಹಕ ತಮಿಳು ಚಿತ್ರ ....

ಕುಳಂದೆ ಉಳ್ಳಂ

ತಾರಾಗಣ— ಜೆಮಿನಿ ಗಣೇಶ್, ಮನೋಹರ್, ರಂಗರಾವ್, ವಿ ಕೆ ರಾಮಸ್ವಾಮಿ ಜೆಮಿನಿ ಬಾಲು, ಸಾಹುಕಾರ್ ಜಾನಕಿ, ವಾಣಿಶ್ರೀ, ಬೇಬಿ ರೋಜಾಮಣಿ, ಸಾವಿತ್ರಿ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata M. S. Krishna Rao (Proprietor) at the Satyavadi Press, Chamarajapuram, Mysoe 4